ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

---

ಸಂಖ್ಯೆ : ವಾಇ : ಜಂ ನಿ : ಸುಮಪ : 2021–22 ದಿನಾಂಕ : 03–08–2021

# ಪತ್ರಿಕಾ ಪ್ರಕಟಣೆ

## PRESS RELEASE

**ಟೋಕಿಯೊ ಒಲಂಪಿಕ್ಸ್: ಭಾರತ ಪುರುಷ ಹಾಕಿ ತಂಡಕ್ಕೆ ಆತ್ಮ ಸ್ಥೈರ್ಯ ತುಂಬಿದ ರಾಜ್ಯಪಾಲರಾದ ಥಾವರಚಂದ್ ಗೆಹ್ಲೋಟ್**

ಬೆಂಗಳೂರು ಆಗಸ್ಟ್ 3 (ಕರ್ನಾಟಕ ವಾರ್ತೆ): ರಾಜಧಾನಿ ಟೋಕಿಯೊದಲ್ಲಿ ನಡೆಯುತ್ತಿರುವ ಒಲಂಪಿಕ್ಸ್ ಕ್ರೀಡಾಕೂಟದಲ್ಲಿ ಸೆಮಿಫೈನಲ್ ವರೆಗೆ ಮುನ್ನುಗ್ಗಿ, ಫೈನಲ್ ಪ್ರವೇಶಿಸಲು ಹಿನ್ನೆಡೆ ಅನುಭವಿಸಿದ ಭಾರತ ಪುರುಷ ಹಾಕಿ ತಂಡಕ್ಕೆ ಕರ್ನಾಟಕ ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್ ಅವರು ಆತ್ಮ ಸ್ಥೈರ್ಯ ತುಂಬಿದ್ದಾರೆ.

ಮಂಗಳವಾರ ನಡೆದ ಭಾರತ-ಬೆಲ್ಜಿಯಂ ಸೆಮಿಫೈನಲ್ ಪಂದ್ಯದಲ್ಲಿ ಭಾರತದ ಪುರುಷರ ಹಾಕಿ ತಂಡಕ್ಕೆ 2-5 ಗೋಲುಗಳ ಅಂತರದಲ್ಲಿ ಸೋಲು ಉಂಟಾಗಿದೆ.

ಈ ಕುರಿತು ಟ್ವೀಟ್ ಮಾಡಿರುವ ಘನತೆವೆತ್ತ ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್ ಅವರು, "ಕ್ರೀಡೆಯಲ್ಲಿ ಸೋಲು, ಗೆಲುವು ಸಹಜ. ಟೊಕಿಯೋ ಒಲಿಂಪಿಕ್ಸ್ ಕ್ರೀಡಾಕೂಟದಲ್ಲಿ ಭಾರತದ ಪುರುಷರ ಹಾಕಿ ತಂಡವು ಕೆಚ್ಚೆದೆಯ ಪ್ರದರ್ಶನ ನೀಡಿರುವುದಕ್ಕೆ ಅಭಿನಂದಿಸುವೆ. ಗೆಲುವಿಗಾಗಿನ ಯತ್ನದಲ್ಲಿ ಸೋತರೆ ಅದು ಸೋಲಾಗದು. ಮರಳಿ ಯತ್ನವ ಮಾಡು ಎಂಬ ತತ್ವವನ್ನು ಭಾರತೀಯ ಹಾಕಿ ತಂಡ ಮೈಗೂಡಿಸಿಕೊಳ್ಳಲಿ ಎಂದು ಭಾರತೀಯ ಹಾಕಿ ತಂಡಕ್ಕೆ ಧೈರ್ಯ ತುಂಬಿದ್ದಾರೆ.

**ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯ ಅನುದಾನ ಕುರಿತು ಸಭೆ**

ಬೆಂಗಳೂರು, ಆಗಸ್ಟ್ 03 (ಕರ್ನಾಟಕ ವಾರ್ತೆ): ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯ ಬಾಕಿ ಅನುದಾನ ಬಿಡುಗಡೆ ಕುರಿತು ಶೀಘ್ರದಲ್ಲಿ ಕ್ರಮಕೈಗೊಳ್ಳುವಂತೆ ಸಭಾಪತಿ ಬಸವರಾಜ ಹೊರಟ್ಟಿ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯ ಬಾಕಿ ಅನುದಾನ ಬಿಡುಗಡೆ ಕುರಿತು ಸಭಾಪತಿ ಬಸವರಾಜ ಹೊರಟ್ಟಿ ಅವರ ಅಧ್ಯಕ್ಷತೆಯಲ್ಲಿ ಇಂದು ವಿಧಾನಸೌಧದಲ್ಲಿ ಸಭೆಯನ್ನು ಹಮ್ಮಿಕೊಳ್ಳಲಾಗಿತ್ತು, ಸಭೆಯಲ್ಲಿ ಈ ಕುರಿತು ಸಮಿತಿಯನ್ನು ರಚಿಸಲು ತೀರ್ಮಾನಿಸಲಾಯಿತು. ಈ ಸಭೆಯಲ್ಲಿ ಚರ್ಚೆಯಾದ ವಿಷಯಗಳನ್ನು ಮುಖ್ಯಮಂತ್ರಿಗಳ ಗಮನಕ್ಕೆ ತರಲಾಗುವುದು ಎಂದು ತಿಳಿಸಿದರು.

ಸಭೆಯಲ್ಲಿ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿಯಿಂದ ಹಮ್ಮಿಕೊಳ್ಳಲಾಗುವ ಕಾಮಗಾರಿಗಳನ್ನು ಎರಡು ವರ್ಷದೊಳಗೆ ಪೂರ್ಣಗೊಳಿಸಲು ಕ್ರಮವಹಿಸುವ ಬಗ್ಗೆ ಚರ್ಚಿಸಲಾಯಿತು. ಹಿಂದಿನ ಕಾಮಗಾರಿಗಳನ್ನು ಆದ್ಯತೆ ಮೇರೆಗೆ ಪೂರ್ಣಗೊಳಿಸುವುದು ಹಾಗೂ ಬಾಕಿ ಇರುವ ಅನುದಾನದ ಬಿಡುಗಡೆಗೆ ಕ್ರಮ ವಹಿಸಲು ತೀರ್ಮಾನಿಸಲಾಯಿತು.

ಸಂಸದರ ಪ್ರದೇಶಾಭಿವೃದ್ಧಿ ನಿಧಿಗೆ ಸಂಬಂಧಿಸಿದ ನಿರ್ದೇಶನಗಳಂತೆ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿ ಬಳಕೆಯಲ್ಲಿಯೂ ಸಹ ಅಳವಡಿಸಿಕೊಳ್ಳಲು ಕ್ರಮವಹಿಸುವಂತೆ ಯೋಜನೆ ರೂಪಿಸಲು ಅಧಿಕಾರಿಗಳಿಗೆ ಸಭಾಪತಿಗಳು ಸೂಚಿಸಿದರು.

ಸಭೆಯಲ್ಲಿ ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಎಸ್.ಆರ್.ಪಾಟೀಲ್, ಉಪಸಭಾಪತಿಗಳಾದ ಎಂ.ಕೆ.ಪ್ರಾಣೇಶ್, ಮುಖ್ಯ ಸಚೇತಕರಾದ ಎಂ.ನಾರಾಯಣ ಸ್ವಾಮಿ ಹಾಗೂ ಯೋಜನೆ ಶಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿ ಶ್ರೀಮತಿ ಶಾಲಿನಿ ರಜನೀಶ್, ಅಪರ ಮುಖ್ಯ ಕಾರ್ಯದರ್ಶಿ ಐ.ಎಸ್.ಎಸ್. ಪ್ರಸಾದ್ ಸೇರಿದಂತೆ ಅನೇಕ ಅಧಿಕಾರಿಗಳು ಭಾಗವಹಿಸಿದ್ದರು.

**ಕರ್ನಾಟಕ ಪ್ರವಾಸೋದ್ಯಮದ ಪ್ರಚಾರ ಮತ್ತು ಉತ್ತೇಜನಕ್ಕೆ**

**ಡಿಜಿಟಲ್ ಮಾರ್ಕೆಟಿಂಗ್ ಸೇವೆಗಾಗಿ ಅರ್ಜಿ ಆಹ್ವಾನ**

ಬೆಂಗಳೂರು, ಆಗಸ್ಟ್ 03 (ಕರ್ನಾಟಕ ವಾರ್ತೆ):

ಕರ್ನಾಟಕ ಸರ್ಕಾರದ ಪ್ರವಾಸೋದ್ಯಮ ಇಲಾಖೆಯು ಪ್ರಚಾರ ಮತ್ತು ಉತ್ತೇಜನಕ್ಕೆ ಸಂಬಂಧಿಸಿದಂತೆ ಇಲಾಖೆಗೆ ಡಿಜಿಟಲ್ ಮಾರ್ಕೆಟಿಂಗ್ ಸೇವೆಗಳನ್ನು ಒದಗಿಸುವಲ್ಲಿ ಸಹಕರಿಸಲು ಇದೇ ಮಾದರಿಯ ಅನುಭವವನ್ನು ಹೊಂದಿರುವ ಏಜೆನ್ಸಿ/ಏಜೆನ್ಸಿಗಳಿಂದ ಪ್ರಸ್ತಾವನೆಯ ವಿನಂತಿ (Request for Proposal) ದಾಖಲೆಯನ್ವಯ ಪ್ರಸ್ತಾವನೆಗಳನ್ನು ಆಹ್ವಾನಿಸಲು ಉದ್ದೇಶಿಸಿರುತ್ತದೆ.

ಈ ಸಂಬಂಧ ಬಿಡ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ ಇ-ಸಂಗ್ರಹಣೆ ವೆಬ್‌ಸೈಟ್ ವಿಳಾಸ http://www.eproc.karnataka.gov.in ದಿಂದ ದಿನಾಂಕ:31-07-2021ರ ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಇದೇ ವೇದಿಕೆಯ ಮೂಲಕ ಆಸಕ್ತ ಬಿಡ್ದುದಾರರು ತಮ್ಮ ಪ್ರಸ್ತಾವನೆಗಳನ್ನು ಸಲ್ಲಿಸಬಹುದಾಗಿದೆ.

ಈ ಸಂಬಂಧ ದಿನಾಂಕ: 10-08-2021ರಂದು ಅಪರಾಹ್ನ 12:00 ಗಂಟೆಗೆ ಈ ಕೆಳಗೆ ನಮೂದಿಸಿರುವ ಇಲಾಖೆಯ ವಿಳಾಸದಲ್ಲಿ ಪ್ರಸ್ತಾವನೆಗಳ ಪೂರ್ವಭಾವಿ ಸಭೆ ಆಯೋಜಿಸಲಾಗುವುದು. ಈ ಟೆಂಡರ್‌ಗೆ ಪ್ರಸ್ತಾವನೆಗಳನ್ನು ಸಲ್ಲಿಸಲು ಅಂತಿಮ ದಿನಾಂಕ 01-09-2021 ಮಧ್ಯಾಹ್ನ 3:00 ಗಂಟೆ ಆಗಿರುತ್ತದೆ. ಈ ಟೆಂಡರ್ ಸಂಬಂಧ ಎಲ್ಲಾ ಹೆಚ್ಚುವರಿ ಅಧಿಸೂಚನೆಗಳು, ಬದಲಾವಣೆಗಳು ಟೆಂಡರ್ ದಾಖಲೆ ತಿದ್ದುಪಡಿಗಳನ್ನು http://www.eproc.karnataka.gov.in ವೆಬ್‌ಸೈಟ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು. ಟೆಂಡರ್ ಆಹ್ವಾನ ಪ್ರಾಧಿಕಾರವು ಈ ಟೆಂಡರ್‌ಗೆ ಸಂಬಂಧಿಸಿದಂತೆ ಸ್ವೀಕೃತವಾಗುವ ಯಾವುದೇ ಒಂದು ಅಥವಾ ಎಲ್ಲಾ ಬಿಡ್‌ಗಳನ್ನು ಯಾವುದೇ ಕಾರಣಗಳನ್ನು ನೀಡದೆ ಅಂಗೀಕರಿಸುವ ಅಥವಾ ತಿರಸ್ಕರಿಸುವ ಪೂರ್ಣ ಹಕ್ಕು ಹೊಂದಿರುತ್ತದೆ. ಈ ಟೆಂಡರ್ ದಾಖಲೆ ಸಂಬಂಧ ಯಾವುದೇ ವಿಚಾರಣೆ/ಸ್ಪಷ್ಟೀಕರಣ ಕುರಿತು ಜಂಟಿ ನಿರ್ದೇಶಕರು (ಪಿಅಂಡ್‌ಪಿ), ಪ್ರವಾಸೋದ್ಯಮ ಇಲಾಖೆ ರವರನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

## “ಬೆಂಗಳೂರು–ಹಂಪಿ–ತುಂಗಭದ್ರ ಡ್ಯಾಂ” ಪ್ಯಾಕೇಜ್ ಟೂರ್

ಬೆಂಗಳೂರು, ಆಗಸ್ಟ್ 03 (ಕರ್ನಾಟಕ ವಾರ್ತೆ):

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬೆಂಗಳೂರು ಕೇಂದ್ರೀಯ ವಿಭಾಗದ ವತಿಯಿಂದ ಸಾರ್ವಜನಿಕ ಪ್ರಯಾಣಿಕರ ಅನುಕೂಲಕ್ಕಾಗಿ **“ಬೆಂಗಳೂರು–ಹಂಪಿ–ತುಂಗಭದ್ರ ಡ್ಯಾಂ”** ಪ್ಯಾಕೇಜ್ ಟೂರನ್ನು **ನಾನ್ ಎಸಿ ಸ್ಲೀಪರ್** ವಾಹನದೊಂದಿಗೆ ವಾರದ ಎಲ್ಲಾ ದಿನ ದಿನಾಂಕ 06/08/2021 ರಿಂದ ಪ್ರಾರಂಭಿಸಿ ಈ ಕೆಳಕಂಡ ವೇಳಾಪಟ್ಟಿಯಂತೆ ಕಾರ್ಯಾಚರಣೆ ಮಾಡಲಾಗುತ್ತಿದೆ. **“ಫ್ರೆಶ್‌ಅಪ್, ಬೆಳಗಿನ ಉಪಹಾರ, ಮಧ್ಯಾಹ್ನದ ಊಟ, ರಾತ್ರಿ ಊಟದ ವ್ಯವಸ್ಥೆಯನ್ನು ಒಳಗೊಂಡಿರುತ್ತದೆ ಹಾಗೂ ಹಂಪಿ ವೀಕ್ಷಣೆಯ ಪ್ರವೇಶ ಶುಲ್ಕವನ್ನು ನಿಗಮದ ವತಿಯಿಂದ ಭರಿಸಲಾಗುವುದು”.**

**ಬೆಂಗಳೂರು–ಹಂಪಿ ಪ್ಯಾಕೇಜ್ ಟೂರ್ ವೇಳಾಪಟ್ಟಿ**

| ಸ್ಥಳ | ನಿರ್ಗಮನ ಸಮಯ | ಹಂಪಿಯಲ್ಲಿ ವೀಕ್ಷಿಸುವ ಸ್ಥಳಗಳು: |
|---|---|---|
| ಬೆಂಗಳೂರಿನಿಂದ ಹೊಸಪೇಟೆ | 2200–0430 | ವಿಜಯ ವಿಠ್ಠಲ ದೇವಸ್ಥಾನ, ವಿರೂಪಾಕ್ಷ ಸ್ವಾಮಿ ದೇವಸ್ಥಾನ, ಸಾಸಿವೆಕಾಳು, ಕಡಲೆಕಾಳು ಗಣೇಶ, ಲಕ್ಷ್ಮಿ ನರಸಿಂಹ, ಬಡವಲಿಂಗ, ಆನೆಗಳ ಅಶ್ವಶಾಲೆ, ಕಲ್ಯಾಣಿ, ಕಮಲ ಮಹಲ್, ಮಹಾನವಮಿ ದಿಬ್ಬ, ರಾಣಿಯರ ಈಜುಕೊಳ |
| ಫ್ರೆಶ್ ಅಪ್, ವಿಶ್ರಾಂತಿ ಸಮಯ ಉಪಹಾರದ ಸಮಯ | 0430–0800 | |
| ಹೊಸಪೇಟೆಯಿಂದ ಹಂಪಿ | 0800–0830 | |
| ಹಂಪಿ ಸ್ಥಳಗಳ ವೀಕ್ಷಣೆ | 0830–1300 | |
| ಮಧ್ಯಾಹ್ನದ ಊಟದ ಸಮಯ | 1300–1330 | |
| ಹಂಪಿ ಸ್ಥಳಗಳ ವೀಕ್ಷಣೆ | 1330–1630 | |
| ಹಂಪಿಯಿಂದ ತುಂಗಭದ್ರಾ ಡ್ಯಾಂ | 1630–1700 | |
| ತುಂಗಭದ್ರಾ ಡ್ಯಾಂ ವೀಕ್ಷಣೆ/ಸಂಗೀತ ಕಾರಂಜಿ | 1700–2000 | |
| ತುಂಗಭದ್ರಾ ಡ್ಯಾಂನಿಂದ ಹೊಸಪೇಟೆ | 2000–2015 | |
| ರಾತ್ರಿ ಊಟ | 2015–2100 | |
| ಹೊಸಪೇಟೆಯಿಂದ ಬೆಂಗಳೂರು | 2100–0430 | |

ಪ್ಯಾಕೇಜ್ ಟೂರ್ ಸಾರಿಗೆಗಳ ಪ್ರಯಾಣದರದ ವಿವರಗಳು

| ಪ್ರಯಾಣಿಕರು | ಪ್ರಯಾಣ ದರ (ರೂ.ಗಳಲ್ಲಿ) |
|---|---|
| ವಯಸ್ಕರು | ₹. 2500–00 |
| ಮಕ್ಕಳಿಗೆ (6 ರಿಂದ 12 ವರ್ಷ) | ₹. 2300–00 |

## ವಸತಿ ಶಾಲೆಗಳ ದಾಖಲಾತಿಗೆ ಸೆಪ್ಟೆಂಬರ್ 16ರಂದು ಪ್ರವೇಶ ಪರೀಕ್ಷೆ

ಬೆಂಗಳೂರು, ಆಗಸ್ಟ್ 03 (ಕರ್ನಾಟಕ ವಾರ್ತೆ): ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮೊರಾರ್ಜಿ ದೇಸಾಯಿ, ಕಿತ್ತೂರು ರಾಣಿ ಚೆನ್ನಮ್ಮ, ಏಕಲವ್ಯ ಮಾದರಿ, ಅಟಲ್ ಬಿಹಾರಿ ವಾಜಪೇಯಿ, ಡಾ: ಬಿ.ಆರ್.ಅಂಬೇಡ್ಕರ್, ಶ್ರೀಮತಿ ಇಂದಿರಾ ಗಾಂಧಿ ವಸತಿ ಶಾಲೆಗಳ 2021–22ನೇ ಸಾಲಿನ ದಾಖಲಾತಿಗಾಗಿ ಸೆಪ್ಟೆಂಬರ್ 16 ರಂದು ಪ್ರವೇಶ ಪರೀಕ್ಷೆಯನ್ನು ನಡೆಸಲಿದ್ದು, ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಆಗಸ್ಟ್ 10 ಕೊನೆಯ ದಿನವಾಗಿದ್ದು, ಪ್ರವೇಶ ಪತ್ರಗಳನ್ನು ಸೆಪ್ಟೆಂಬರ್ 4 ರಿಂದ 13ರ ವರೆಗೆ ಡೌನ್ ಲೋಡ್ ಮಾಡಿಕೊಳ್ಳಬಹುದು.ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳು ಸರ್ಕಾರಿ–ಸರ್ಕಾರದಿಂದ ಅನುಮೋದಿಸಲ್ಪಟ್ಟ ಶಾಲೆಯಲ್ಲಿ 5ನೇ ತರಗತಿ ವ್ಯಾಸಾಂಗ ಮಾಡಿ ಉತ್ತೀರ್ಣರಾಗಿರಬೇಕು. ಕರ್ನಾಟಕದ ಖಾಯಂ ನಿವಾಸಿಯಾಗಿರಬೇಕು. 9 ರಿಂದ 13 ವಯೋಮಾನದವರಾಗಿರಬೇಕು. ಕುಟುಂಬದ ವಾರ್ಷಿಕ ವರಮಾನ ಪರಿಶಿಷ್ಟ ಜಾತಿ–ಪರಿಶಿಷ್ಟವರ್ಗ, ಹಿಂದುಳಿದ ವರ್ಗದ ಪ್ರವರ್ಗ1ರ ಅಭ್ಯರ್ಥಿಗಳಿಗೆ ರೂ. 2.50 ಲಕ್ಷ, ಹಿಂದುಳಿದ ವರ್ಗ 2ಎ, 2ಬಿ, 3ಎ ಮತ್ತು 3 ಬಿ ವರ್ಗದವರಿಗೆ ರೂ. 1 ಲಕ್ಷ ಹೊಂದಿರಬೇಕು. ಸಂಬಂಧಿಸಿದ ಶಾಲೆಯಿಂದ ಎಸ್‌ಎಟಿಎಸ್ ಸಂಖ್ಯೆಯನ್ನು ಪಡೆದು, ಮೀಸಲಾತಿಗೆ ಸಂಬಂಧಿಸಿದ ಎಲ್ಲಾ ಮೂಲ ದಾಖಲಾತಿಗಲೋಂದಿಗೆ ಹತ್ತಿರವಿರುವ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘದ ಯಾವುದೇ ವಸತಿ ಶಾಲೆಯಲ್ಲಿ ಪ್ರಾಂಶುಪಾಲರ ಮೂಲಕ ಉಚಿತವಾಗಿ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕು. ನೇರವಾಗಿ ಅಭ್ಯರ್ಥಿಯು ಯಾವುದಾದರೂ ಸ್ಥಳದಿಂದ ಅರ್ಜಿ ಅಲ್ಲಿಸಲು ಅವಕಾಶವಿಲ್ಲ.

ಅರ್ಜಿಯೊಂದಿಗೆ ಎಸ್‌ಎಟಿ ಸಂಖ್ಯೆ, ಇತ್ತೀಚಿನ ಭಾವಚಿತ್ರ, ಮೀಸಲಾತಿಯ ಪ್ರಯೋಜನಗಳನ್ನು ಕೋರಿರುವ ಪಕ್ಷದಲ್ಲಿ ಸಂಬಂಧಪಟ್ಟ ಪ್ರಾಧಿಕಾರದಿಂದ ಪಡೆದ ಚಾಲ್ತಿಯಲ್ಲಿರುವ ಜಾತಿ ಮತ್ತು ಆದಾಯ ಪ್ರಮಾಣ ಪತ್ರ. ಸ್ಥಳೀಯ ಅಭ್ಯರ್ಥಿ ಎಂದು ರುವಾತು ಪಡಿಸಲು ಅಗತ್ಯವಾದ ಆಧಾರ್‌ಕಾರ್ಡ್, ರೇಷನ್ ಕಾರ್ಡ್, ಸ್ಥಳೀಯ ಪ್ರಮಾಣ ಪತ್ರ, ವಿಶೇಷ ಪ್ರವರ್ಗಗಳಿಗೆ ಸಂಬಂಧಿಸಿದ ಪ್ರಮಾಣ ಪತ್ರಗಳೊಂದಿಗೆ ಸಲ್ಲಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಆಯಾ ಜಿಲ್ಲೆಯ ಸಮಾಜ ಕಲ್ಯಾಣ ಇಲಾಖೆ, ಹಿಮದುಳಿದ ವರ್ಗಗಳ ಕಲ್ಯಾಣ ಇಲಾಖೆ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಸಂಘದಡಿ ಕಾರ್ಯನಿರ್ವಹಿಸುತ್ತಿರುವ ಹತ್ತಿರದ ವಸತಿ ಶಾಲೆ, ಕಾಲೇಜು ಅಥವಾ ಕರ್ನಾಟಕ ಪರೀಕ್ಷಾ ಪ್ರಾಧಿಕಾರ, 18ನೇ ಅಡ್ಡರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560 012, ಇ–ಮೇಲ್ : keauthority-ka@nic.in ವೆಬ್‌ಸೈಟ್ http://kea.kar.nic.in ಸಹಾಯವಾಣಿ 080–23 460 460 ಮೂಲಕ ಸಂಪರ್ಕಿಸಬಹುದು.

## ದತ್ತು ಸ್ವೀಕಾರ

ಬೆಂಗಳೂರು, ಆಗಸ್ಟ್ 03 (ಕರ್ನಾಟಕ ವಾರ್ತೆ): ಲಯನ್ಸ್ ಕ್ಲಬ್ ಆಫ್ ಮೈಸೂರು ಪ್ಯಾಲೇಸ್ ಸಿಟಿ ಮತ್ತು ಜಿಯೋನೆಟ್ ಕನ್ಸಲ್ಟೆಂಟ್, ಮೈಸೂರು ರವರು 1 ಲಕ್ಷ ರೂ.ಗಳನ್ನು ಪಾವತಿಸಿ ಸಿಂಹ ಪ್ರಾಣಿಯನ್ನು ಹಾಗೂ ಪ್ರಿಶಾ ಶಶಾಂಕ್, ಭೂಪಾಲ್ ರವರು 50 ಸಾವಿರ ರೂ.ಗಳನ್ನು ಪಾವತಿಸಿ ಜೀಬ್ರ ಪ್ರಾಣಿಯನ್ನು ಒಂದು ವರ್ಷದ ಅವಧಿಗೆ ಮೈಸೂರು ಮೃಗಾಲಯದಿಂದ ದತ್ತು ಪಡೆದಿರುತ್ತಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಮಂಡಳಿಯ ವಿವಿಧ ಉಪವಿಭಾಗಗಳಲ್ಲಿ ನೀರಿನ ಅದಾಲತ್

*****

ಬೆಂಗಳೂರು, ಆಗಸ್ಟ್ 03 (ಕರ್ನಾಟಕ ವಾರ್ತೆ): ಬೆಂಗಳೂರು ಜಲಮಂಡಳಿಯು ದಿನಾಂಕ: 05.08.2021 ರ ಗುರುವಾರ **(ಪಶ್ಚಿಮ)–1, (ನೈರುತ್ಯ)–1, ಆಗ್ನೇಯ–1), (ದಕ್ಷಿಣ–1),( ಪೂರ್ವ–2)–1, ( ಪೂರ್ವ–1)–1 , (ಉತ್ತರ ವಿಲೇಜ್)–2, (ಕೇಂದ್ರ–1) (ವಾಯುವ್ಯ–1) ಮತ್ತು (ವಾಯುವ್ಯ–4)** ಉಪವಿಭಾಗಗಳಲ್ಲಿ ನೀರಿನ ಬಿಲ್ಲು, ನೀರು ಮತ್ತು ಒಳಚರಂಡಿ ಸಂಪರ್ಕ ಕಲ್ಪಿಸುವಲ್ಲಿನ ವಿಳಂಬ, ಗೃಹ ಬಳಕೆಯಿಂದ ಗೃಹೇತರ ಬಳಕೆ ಪರಿವರ್ತನೆ ವಿಳಂಬ ಮತ್ತಿತರ ಕುಂದುಕೊರತೆಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಲು ನೀರಿನ ಅದಾಲತ್‌ಅನ್ನು ಬೆಳಗ್ಗೆ 9.30 ರಿಂದ 11:00 ಗಂಟೆಯವರೆಗೆ ನಡೆಸುತ್ತಿದ್ದು, ಅದಾಲತ್ ನಡೆಯುವ ಸ್ಥಳಗಳ ವಿವರ ಈ ಕೆಳಗಿನಂತಿದೆ.

| ಉಪವಿಭಾಗದ ಹೆಸರು | ವಿಳಾಸ | ಸೇವಾಠಾಣೆಗಳು | ದೂರವಾಣಿ ಸಂಖ್ಯೆ |
|---|---|---|---|
| (ಪಶ್ಚಿಮ)-1 | ನೆಲಮಹಡಿ, ಅರ್ಕಾವತಿ ಭವನ, 5ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಆರ್.ಪಿ.ಸಿ ಲೇಔಟ್, ವಿಜಯನಗರ 2ನೇ ಹಂತ, ಬೆಂಗಳೂರು-40 | ಮಾಗಡಿ ರಸ್ತೆ-1,2, ಹೊಸಹಳ್ಳಿ ಪಂಪ್ ಹೌಸ್, ಮೈಸೂರು ರಸ್ತೆ, | 9845444069 |
| (ನೈರುತ್ಯ)-1 | ದ್ವಾರಕನಾಥ ರಸ್ತೆ, ನ್ಯಾಷನಲ್ ಕಾಲೇಜು ಮುಂಭಾಗ, ವಿ.ವಿ.ಪುರಂ ಬೆಂಗಳೂರು-04 | ವಿ.ವಿ.ಪುರಂ, ಸುಧಾಮನಗರ-2, ಕೆಂಪೇಗೌಡ ನಗರ, ಜಗಜೀವನ್‌ರಾಮ್ ನಗರ,ಚಾಮರಾಜಪೇಟೆ | 22425193 |
| (ಆಗ್ನೇಯ-1) | ಸ್ವಾಮಿ ವಿವೇಕಾನಂದ ರಸ್ತೆ, ಆಡೋ ಮಾಲ್ ಎದುರು, ಹಲಸೂರು, ಬೆಂಗಳೂರು-08 | ಸಿ.ಎಲ್.ಆರ್, ಜಾನ್ಸನ್ ಮಾರ್ಕೆಟ್. | 9845444052 |
| ( ದಕ್ಷಿಣ-1) | ಜಂಬೂಸವಾರಿ ದಿಣ್ಣೆ ಮುಖ್ಯ ರಸ್ತೆ, 8ನೇ ಘಟ್ಟ, ಜೆ.ಪಿ.ನಗರ, ಬೆಂಗಳೂರು-76. | ಜೆ.ಪಿ.ನಗರ-2, ಕೊತ್ತನೂರು ದಿಣ್ಣೆ, ಜಂಬೂಸವಾರಿ ದಿಣ್ಣೆ, ವಿಜಯಬ್ಯಾಂಕ್ ಕಾಲೋನಿ, ಅರಕೆರೆ & ಮೈಕೋ ಲೇಔಟ್. | 9740984164 |
| ( ಪೂರ್ವ-2)-1 | 1ನೇ ಬ್ಲಾಕ್, 9ನೇ 'ಡಿ' ಮುಖ್ಯ ರಸ್ತೆ, ಸರ್ವಿಸ್ ರಸ್ತೆ, ಹೆಚ್.ಆರ್.ಬಿ.ಆರ್ ಲೇಔಟ್, ಕಲ್ಯಾಣ ನಗರ,ಬೆಂಗಳೂರು-43 | ಹೆಚ್.ಆರ್.ಬಿ.ಆರ್.ಲೇಔಟ್ & ಹೆಚ್.ಬಿ.ಆರ್ ಲೇಔಟ್,ಕಾಚರಕನಹಳ್ಳಿ, ಕಲ್ಯಾಣನಗರ | 9845444150 |
| ( ಪೂರ್ವ-1)-1 | ಬಿ.ಇ.ಎಂ.ಎಲ್ ಲೇಔಟ್, ಐ.ಟಿ.ಪಿ.ಎಲ್ ಹತ್ತಿರ 4ನೇ ಮುಖ್ಯ ರಸ್ತೆ, ಕುಂದಲಹಳ್ಳಿ ಮುಖ್ಯ ರಸ್ತೆ, ಬೆಂಗಳೂರು-66 | ಎ.ಇ.ಸಿ.ಎಸ್- 1 & 2, ಹೂಡಿ | 9740984161 |
| (ಉತ್ತರ ವಿಲೇಜ್)-2 | 1ನೇ ಮಹಡಿ, ಪಿನಾಕಿನಿಭವನ, ದೊಡ್ಡ ಬಳ್ಳಾಪುರ ರಸ್ತೆ, ಮೇಜರ್ ಉನ್ನಿಕೃಷ್ಣನ್ ರಸ್ತೆ, ಯಲಹಂಕ,ಬೆಂಗಳೂರು | ಜಿ.ಕೆ.ವಿ.ಕೆ, ಮಾನ್ಯತಾ ಟೆಕ್ ಪಾರ್ಕ್ | 9632029191 |
| (ಕೇಂದ್ರ-1) | ನಂ. 17, ಪಾರ್ಕ್ ರೋಡ್, ತುಳಸಿ ತೋಟ, ಚಿಕ್ಕ ಲಾಲ್‌ಬಾಗ್, ಬೆಂಗಳೂರು-53 | ಎಲ್.ಎಲ್.ಆರ್, ಚಿಕ್ಕಲಾಲ್‌ಬಾಗ್, ಬನ್ನಪ್ಪ ಪಾರ್ಕ್, ಸುಧಾಮನಗರ-1. | 9845444081 |
| (ವಾಯುವ್ಯ-1) | 1ನೇ 'ಎನ್' ಬ್ಲಾಕ್, 4ನೇ ಅಡ್ಡ ರಸ್ತೆ, ವಿದ್ಯಾವರ್ಧಕ ಶಾಲೆ ಹಿಂಭಾಗ (ಕೇತಮಾರನ ಹಳ್ಳಿ ವಾಟರ್ ಟ್ಯಾಂಕ್) ರಾಜಾಜಿನಗರ, ಬೆಂಗಳೂರು-10 | ಕೇತಮಾರನಹಳ್ಳಿ, ಮಹಾಲಕ್ಷ್ಮಿ ಲೇಔಟ್, ರಾಜಾಜಿನಗರ- 1, 2, ನಂದಿನಿಲೇಔಟ್-1 | 22945176 |
| (ವಾಯುವ್ಯ-4) | ನೆಲಮಹಡಿ, 7ನೇ ಮುಖ್ಯ ರಸ್ತೆ, | ಎಂ.ಇ.ಐ. ಲೇಔಟ್ -1 & 2, | 9686448013 |

| | | | |
|---|---|---|---|
| | ಎಂಇಐ ಲೇಔಟ್, ಹೆಸರಘಟ್ಟ ರಸ್ತೆ. ಬೆಂಗಳೂರು–73 | ಬಾಹುಬಲಿನಗರ. | |

ಕುಂದು ಕೊರತೆಗಳಿಗೆ ಸಂಬಂಧಿಸಿದಂತೆ ಮಂಡಲಿಯ 24/7 ದೂರು ನಿರ್ವಹಣಾ ಕೇಂದ್ರದ ದೂರವಾಣಿ ಸಂಖ್ಯೆ:22238888, ಸಹಾಯವಾಣಿ 1916 ಹಾಗೂ ವಾಟ್ಸ್‌ಆಪ್ ಸಂಖ್ಯೆ:8762228888 ಗೆ ಸಂಪರ್ಕಿಸಬಹುದಾಗಿದೆ. ಸಾರ್ವಜನಿಕರು ಮೇಲಿನ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಈ ಅದಾಲತ್ ಸೌಲಭ್ಯವನ್ನು ಬಳಸಿಕೊಳ್ಳಬಹುದಾಗಿದೆ ಹಾಗೂ ಕೋವಿಡ್–19 ನ ಮರುತೆರವು ಮಾರ್ಗಸೂಚಿಯನ್ವಯ ಸಭೆಗೆ ಹಾಜಾರಾಗಲಿರುವ ಸಂದಂರ್ಭದಲ್ಲಿ ಎಲ್ಲಾ ಸುರಕ್ಷತೆಯನ್ನು ಕಾಪಾಡಿಕೊಳ್ಳುವುದು.

**Karnataka State Pollution Control Board**

**ParisaraBhavan, Bengaluru**

**AQI of the CAAQM stations established in Bengaluru City**

**Date : 3.8.2021 (Average of past 24 hours)**

| Sl. No. | Station | AQI | Category | Prominent Pollutant |
|---|---|---|---|---|
| 1 | Veterinary College Hebbal | 38 | Good | $PM_{10}$ |
| 2 | Jayanagar 5$^{th}$ Block, Shalini ground | 40 | Good | $PM_{10}$ |
| 3 | KAVIKA, Mysore Road | 71 | Satisfactory | $PM_{10}$ |
| 4 | Rajeev Gandhi Institute of Chest Disease, NIMHANS, Hombegowda Nagar | 51 | Satisfactory | $PM_{10}$ |
| 5 | HSR Layout, near Central Silkboard | 90 | Satisfactory | $PM_{10}$ |
| 6 | City Railway Station, Magestic, Bengaluru | 55 | Satisfactory | $PM_{10}$ |
| 7 | Saneguruvanahalli, NisargaBhavan, KSPCB, Shivanagara | 44 | Good | $PM_{10}$ |
| **(3.8.2021 at 11.05 AM)** | | | | |

| | | | | |
|---|---|---|---|---|
| 8 | BWSSB, Kadabesanahalli | 155 | Moderate | CO |
| 9 | Peenya | * | * | * |
| 10 | BTM Layout | 75 | Satisfactory | $PM_{2.5}$ |

* Data not available

| Category (Range) | Possible Health Impacts | Category (Range) | Possible Health Impacts |
|---|---|---|---|
| Good (0–50) | Minimal Impact | Poor (201–300) | Breathing discomfort to people on prolonged exposure |
| Satisfactory (51–100) | Minor breathing discomfort to sensitive people | Very Poor (301–400) | Respiratory illness to the people on prolonged exposure |
| Moderate (101–200) | Breathing discomfort to the people with lung, Heart disease, children and older | Severe (>401) | Respiratory effects even on healthy people |

**ಕರ್ನಾಟಕರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ**

**ಪರಿಸರ ಭವನ, ಬೆಂಗಳೂರು.**

**ಬೆಂಗಳೂರು ನಗರದಲ್ಲಿ ಸ್ಥಾಪಿಸಿರುವ ನಿರಂತರ ಪರಿವೇಷ್ಟಕ ವಾಯುಗುಣಮಟ್ಟ ಮಾಪನ ಕೇಂದ್ರಗಳ ವಾಯುಗುಣಮಟ್ಟ ಸೂಚ್ಯಂಕ (AQI), ಬೆಂಗಳೂರು**

**ದಿನಾಂಕ: 3.8.2021(Average of past 24 hours)**

| ಕ್ರಮ ಸಂಖ್ಯೆ | ಮಾಪನ ಕೇಂದ್ರಗಳ ಹೆಸರು | ವಾಯುಗುಣಮಟ್ಟ ಸೂಚ್ಯಂಕ (AQI) | ವರ್ಗ | ಪ್ರಮುಖ ಮಾಲಿನ್ಯಕಾರಕ |
|---|---|---|---|---|
| 1 | ಪಶುವೈದ್ಯಕೀಯಕಾಲೇಜು, ಹೆಬ್ಬಾಳ | 38 | ಉತ್ತಮ | $PM_{10}$ |
| 2 | ಜಯನಗರ 5ನೇ ಬ್ಲಾಕ್, ಶಾಲಿನಿ ಮೈದಾನ | 40 | ಉತ್ತಮ | $PM_{10}$ |
| 3 | ಕವಿಕ, ಮೈಸೂರುರಸ್ತೆ | 71 | ತೃಪ್ತಿಕರ | $PM_{10}$ |
| 4 | ರಾಜೀವ್‌ಗಾಂಧಿಎದೆರೋಗಗಳ ಸಂಸ್ಥೆ, ನಿಮ್ಹಾನ್ಸ್ ಹೊಂಬೆಗೌಡನಗರ | 51 | ತೃಪ್ತಿಕರ | $PM_{10}$ |
| 5 | ಹೆಚ್.ಎಸ್.ಆರ್ ಲೇಔಟ್, ಕೇಂದ್ರರೇಷ್ಮೆ ಮಂಡಳಿ ಹತ್ತಿರ | 90 | ತೃಪ್ತಿಕರ | $PM_{10}$ |
| 6 | ನಗರರೈಲ್ವೆ ನಿಲ್ದಾಣ, ಮೆಜೆಸ್ಟಿಕ್, ಬೆಂಗಳೂರು | 55 | ತೃಪ್ತಿಕರ | $PM_{10}$ |
| 7 | ಸಾಣೆಗುರುವನಹಳ್ಳಿ, ನಿಸರ್ಗ ಭವನ, ಕರ್ನಾಟಕರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಶಿವನಗರ | 44 | ಉತ್ತಮ | $PM_{10}$ |
| **(3.8.2021 at 11.05 AM)** | | | | |

| | | | | |
|---|---|---|---|---|
| | | | | |
| 8 | BWSSB,ಕಾಡಬೀಸನಹಳ್ಳಿ | 155 | ಸಾಧಾರಣ | CO |
| 9 | ಪೀಣ್ಯ | * | * | * |
| 10 | ಬಿಟಿಎಂ ಲೇಔಟ್ | 75 | ತೃಪ್ತಿಕರ | $PM_{2.5}$ |

| ವರ್ಗ(ಶ್ರೇಣಿ) | ಉಂಟಾಗಬಹುದಾದಆರೋಗ್ಯ ಪರಿಣಾಮಗಳು |
|---|---|
| **ಉತ್ತಮ (0–50)** | ಕನಿಷ್ಠ ಪರಿಣಾಮ |
| **ತೃಪ್ತಿಕರ (51–100)** | ಸೂಕ್ಷ್ಮಜನರಿಗೆ ಸಣ್ಣ ಉಸಿರಾಟದ ಅಸ್ವಸ್ಥತೆ |
| **ಸಾಧಾರಣ (101–200)** | ಶ್ವಾಸಕೋಶ, ಹೃದಯಕಾಯಿಲೆಯವರು, ಮಕ್ಕಳು ಮತ್ತು ಹಿರಿಯ ವಯಸ್ಕರಿಗೆ ಉಸಿರಾಟದ ಅಸ್ವಸ್ಥತೆ |
| **ಕಳಪೆ (201–300)** | ದೀರ್ಘಕಾಲಿಕಒಡ್ಡುವಿಕೆಯಿಂದಜನರಿಗೆ ಉಸಿರಾಟದ ಅಸ್ವಸ್ಥತೆ |
| **ಅತಿ ಕಳಪೆ (301–400)** | ದೀರ್ಘಕಾಲಿಕಒಡ್ಡುವಿಕೆಯಿಂದಜನರಿಗೆ ಶ್ವಾಸಕೋಶದಅಸ್ವಸ್ಥತೆ |
| **ತೀವ್ರ (>401)** | ಆರೋಗ್ಯವಂತಜನರಿಗೂ ಉಸಿರಾಟದ ಅಸ್ವಸ್ಥತೆ |